ವಿಷಯ :- ಖಾದಿಬಟ್ಟೆ ರಿಬೇಟ್ ರದ್ದತಿಯಿಂದ ಉದ್ದಿಮೆಗಳಿಗೆ ಹಾನಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 824 (759)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಸಣ್ಣ ಪ್ರಮಾಣದ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೇಂದ್ರ ಸರ್ಕಾರ ಖಾದಿ ಆಯೋಗದ ಮೂಲಕ ನೀಡುತ್ತಿದ್ದ ಖಾದಿ ಬಟ್ಟೆಯ ಮೇಲಿನ ರಿಬೇಟನ್ನು ನಿಲ್ಲಿಸಿರುವುದರಿಂದ ಖಾದಿ ಬಟ್ಟೆ ಏರ್ಪಾಗದೆ ಉಳಿದು ಖಾದಿ ಸಂಸ್ಥೆಯ ಉದ್ದಿಮೆಗಳು ನಷ್ಟ ಹೊಂದಿ, ಅವುಗಳು ಮುಚ್ಚುವಂತಹ ಪ್ರಸಂಗ ಉದ್ಭವಿಸಿ ರಾಜ್ಯದಲ್ಲಿ ಸಾವಿರಾರು ಜನರು ನಿರುದ್ಯೋಗಿಗಳಾಗುವ ಸಂಭವಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಆ) ಹಾಗಿದ್ದಲ್ಲಿ, ರಿಬೇಟ್ ಮುಂದುವರಿಕೆಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಎ. ಮೊಯ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :-

ಅ) ಖಾದಿ ಆಯೋಗವು ತಮ್ಮ ಪರಿಪತ್ರ ಸಂಖ್ಯೆ ಡಿಕೆಸಿ ರಿಬೇಟ್ ಪಾಲಿಸಿ 96-97 ದಿನಾಂಕ 1-6-1996 ರಲ್ಲಿ ಖಾದಿ ಮಾರಾಟದ ಮೇಲೆ ರಿಬೇಟನ್ನು ಹಿಂತೆಗೆ ದುಕೊಂಡಿತ್ತು. ಅನೇಕ ಖಾದಿ ಸಂಸ್ಥೆಗಳ ಮನವಿ ಹಿನ್ನೆಲೆಯಲ್ಲಿ ಪರಿಪತ್ರ ಸಂಖ್ಯೆ ಡಿಕೆಸಿ ರಿಬೇಟ್ ಪಾಲಿಸಿ 96-97 ದಿನಾಂಕ 12 25-7-2996 ರಲ್ಲಿ ಖಾದಿ ರಿಬೇಟನ್ನು 1996-97 ರ ಸಾಲಿನಲ್ಲಿ ಮುಂದುವರಿಸಲು ಖಾದಿ ಆಯೋಗ ಪ್ರಕಟಣೆ ನೀಡಿರುತ್ತದೆ. ಆದ್ದರಿಂದ ಖಾದಿ ಸಂಸ್ಥೆಗಳಲ್ಲಿ ನಷ್ಟ ಮತ್ತು ನಿರುದ್ಯೋಗದ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ :- ತಲಘಟ್ಟಪುರ ರೇಷ್ಮೆ ಸಂಶೋಧನ ಕೇಂದ್ರದಲ್ಲಿ ಅವ್ಯವಹಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 825 (1314)

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಲಘಟ್ಟಪುರ, ರೇಷ್ಮೆ ಸಂಶೋಧನಾ ಕೇಂದ್ರದಿಂದ ಇಲ್ಲಿಯವರೆಗೆ ಇಲಾಖೆಗೆ ಸಂಶೋಧನೆಯಿಂದ ಪ್ರಯೋಜನವಾಗಿದೆಯೇ.

ಆ) ಹಾಗಿದ್ದಲ್ಲಿ, ಯಾವ ಯಾವ ರೀತಿಯ ಸಂಶೋಧನೆಗಳನ್ನು ಮಾಡಿರುತ್ತಾರೆ.

ಇ) ಈ ಸಂಸ್ಥೆಯಲ್ಲಿ ನಡೆಯಿತೆನ್ನಲಾದ ಅವ್ಯವಹಾರದ ಬಗ್ಗೆ ತನಿಖೆಯಾಗುತ್ತಿದೆಯೇ?

ಈ) ಈ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು) :-

ಅ) ಹೌದು.

ಆ) ಅನುಬಂಧದಲ್ಲಿ ನಮೂದಿಸಿದೆ.

ಇ) ಕರ್ನಾಟಕ ಮಹಾಲೇಖಪಾಲರು ಮತ್ತು ರಾಜ್ಯ ಲೆಕ್ಕಪತ್ರ ಇಲಾಖೆಯನ್ನು ಸಂಸ್ಥೆಯ ಲೆಕ್ಕಪತ್ರಗಳನ್ನು ವಿವರವಾದ ಲೆಕ್ಕಪರಿಶೋಧನೆ ಮಾಡುವಂತೆ ಕೋರಲಾಗಿದೆ. ಲೆಕ್ಕ ಪರಿಶೋಧನೆಯು ಜರುಗುತ್ತಿದೆ.

ಈ) ಲೆಕ್ಕ ಪರಿಶೋಧನಾ ವರದಿಗಳನ್ನು ನಿರೀಕ್ಷಿಸಲಾಗಿದೆ. ಅವುಗಳನ್ನು ಸ್ವೀಕರಿಸಿದ ಮೇಲೆ ಪರಿಶೀಲಿಸಲಾಗುವುದು.

ಅನುಬಂಧ-1

ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಿಂದ ಕ್ಷೇತ್ರಕ್ಕೆ ಬಿಡುಗಡೆ ಮಾಡಿರುವ ತಾಂತ್ರಿಕತೆಗಳು ಮತ್ತು ಸಂಸ್ಥೆ ಒದಗಿಸುತ್ತಿರುವ ಸೇವಾ ಸೌಲಭ್ಯಗಳು.

ಅ. ತಾಂತ್ರಿಕತೆಗಳು

1. ಹಿಪ್ಪುನೇರಳೆ ತೋಟಕ್ಕೆ ಮಣ್ಣು ಪರೀಕ್ಷಾಧಾರಿತ ರಸಗೊಬ್ಬರದ ಬಳಕೆ.
2. ಸುಧಾರಿತ ಹಿಪ್ಪುನೇರಳೆ ತಳಿ-ಡಿಡಿ.
3. 'ಪ್ರಕೃತಿ' ಹಿಪ್ಪುನೇರಳೆಗಾಗಿ ಸಾರಜನಕ ಸ್ಥಿರೀಕರಿಸುವ ಜೈನಿಕ ಗೊಬ್ಬರ.
4. ಉಷ್ಣ ಪ್ರದೇಶದಲ್ಲಿ ಚಾಕಿ ಹಿಪ್ಪುನೇರಳೆ ತೋಟಗಳಿಗಾಗಿ ಸುಧಾರಿತ ಸಾಂದ್ರ ಬೇಸಾಯ.

ಕ್ರಮಗಳು:

5. ಹಿಪ್ಪುನೇರಳೆಯಲ್ಲಿ ಲಘು ಪೋಷಕಾಂಶಗಳ ಕೊರತೆ ಮತ್ತು ಸುಧಾರಣೆ.
6. ಹಿಪ್ಪುನೇರಳೆಯಲ್ಲಿ ಕಾಂಡದ ಕ್ಯಾಂಕರ್ ರೋಗ ನಿಯಂತ್ರಣ.
7. ಚಾಕಿ ಹುಳುವಿನ ಸಾಕಣೆಗಾಗಿ ಚಾಕಿ ಪೆಟ್ಟಿಗೆ.
8. ಹಿಪ್ಪುನೇರಳೆ ರೆಂಬೆಗಳಿಂದ ಬೆಳೆದ ರೇಷ್ಮೆ ಹುಳು ಸಾಕಣೆ.

9. ಸಂಜೀವಿನಿ ಮತ್ತು ಸುರಕ್ಷ ಸೋಂಕು ನಿವಾರಕಗಳು.

10. ಸಂಸ್ಥೆಯ ಹೊಸ ದ್ವಿಸಂತತಿ ತಳಿಗಳ ವಿಶಿಷ್ಟತೆ.

11. ರೇಷ್ಮೆ ಮೊಟ್ಟೆಗಳ ಉಪಚಾರಕ್ಕೆ ನೂತನ ತಾಂತ್ರಿಕತೆಗಳು.

12. ರೇಷ್ಮೆ ಮೊಟ್ಟೆಗಳನ್ನು ಸಾಗಿಸುವ ಪೆಟ್ಟಿಗೆ.

13. ರೇಷ್ಮೆ ಬಿತ್ತನೆಕೋಠಿಗಳಲ್ಲಿ ಹಾನಿಕಾರಕ ಕೀಟಗಳ ತಡೆ ಹಾಗೂ ನಿಯಂತ್ರಣ.

14. ರೇಷ್ಮೆ ಬಿತ್ತನೆ ಕೋಠಿಗಳಲ್ಲಿ ಹಾನಿಕಾರಕ ಕೀಟಗಳ ತಡೆ ಹಾಗೂ ನಿಯಂತ್ರಣ.

15. ಸೋಂಕು ನಿವಾರಣೆ ಹಾಗೂ ಸ್ವಚ್ಛತೆಗಾಗಿ ಬಹುಪಯೋಗಿ ಸಂಪು.

16. ಹಿಪ್ಪುನೇರಳೆ ಸೊಪ್ಪು ಕತ್ತರಿಸುವ ಯಂತ್ರ.

17. ರೇಷ್ಮೆ ಹುಳುಗಳಿಗೆ ದಿನಕ್ಕೆ ಒಂದು ಬಾರಿ ಸೊಪ್ಪು ನೀಡಿ ಸಾಕಾಣಿಕೆ ಮಾಡುವ ವಿಧಾನ.

18. ಸುಲಭ ರೀತಿಯಲ್ಲಿ ಚಾಕಿ ಸಾಕಾಣಿಕೆಗೆ ಸೊಪ್ಪನ್ನು ಶೇಖರಿಸಿಡುವ ವಿಧಾನ.

19. ರೇಷ್ಮೆ ನೂಲು ಬಿಚ್ಚಾಣಿಕಾ ತಂತ್ರಜ್ಞಾನ.

20. ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಡೀನಿಯರ್ ಸೂಚಕ.

21. ಬೀಸು ಪ್ರತ್ಯೇಕಿಸುವ ಯಂತ್ರ.

22. ಕೊರೆದ ಗೂಡಿನಿಂದ ರೇಷ್ಮೆ ನೂಲುವ ಯಂತ್ರ.

23. ಊಜಿ ನೊಣದ ನಿಯಂತ್ರಣಕ್ಕೆ ಊಜಿ ಪುಡಿ.

ಆ. ಸೇವಾ ಸೌಲಭ್ಯಗಳು.

1. ಹಿಪ್ಪುನೇರಳೆ ತೋಟಗಳ ಮಣ್ಣು ಪರೀಕ್ಷೆ ಮತ್ತು ಗೊಬ್ಬರಗಳ ಶಿಫಾರಸ್ಸು.

2. ಹಿಪ್ಪುನೇರಳೆ ಸೊಪ್ಪಿನ ವಿಶ್ಲೇಷಣೆ ಮತ್ತು ಗುಣ ನಿರ್ಣಯ ಸೂಕ್ತ ಸಲಹೆ.

3. ಜೈವಿಕ ಗೊಬ್ಬರ ಪ್ರಕೃತಿ ಉತ್ಪಾದನೆ ಹಾಗೂ ವಿತರಣೆ.

4. ರೋಗ ಪೀಡಿತ ಹುಳಗಳ ಪರೀಕ್ಷೆ ಮತ್ತು ರೋಗ ನಿರ್ಣಯದೊಂದಿಗೆ ತಡೆ ಕ್ರಮಗಳು ಶಿಫಾರಸ್ಸು.

5. ದ್ವಿಸಂತತಿ ಹಾಗೂ ಬಹುಸಂತತಿ ರೇಷ್ಮೆ ಮೊಟ್ಟೆಗಳ ಪಿ4 ನಿರ್ವಹಣೆ ಮತ್ತು ಇಲಾಖೆಗೆ ಪಿ3 ಮೊಟ್ಟೆಗಳ ವಿತರಣೆ.

6. ಹುಳು ಸಾಕಾಣೆ ಮಾಡುವ ಮನೆಯ ವಿನ್ಯಾಸ ಮತ್ತು ಸಲಹೆ.

7. ನೂಲು ಬಿಚ್ಚಾಣಿಕಾ ನೀರಿನ ಪರೀಕ್ಷೆ ಮತ್ತು ಸರಿಪಡಿಸುವ ವಿಧಾನಗಳ ಶಿಫಾರಸ್ಸು.

8. ರೇಷ್ಮೆ ದಾರದ ಪರೀಕ್ಷೆ.

9. ರೇಷ್ಮೆ ಬಟ್ಟೆಯ ಪರೀಕ್ಷೆ.

10. ತಾಂತ್ರಿಕ ವಿಷಯಗಳ ಬಗ್ಗೆ ತರಬೇತಿ ನೀಡುವುದು.

ವಿಷಯ :- ಕುಂದಾಪುರ ಪುರಸಭೆಯಿಂದ ಮಂಜೂರಾದ ನಿವೇಶನಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 827 (1625)

ಶ್ರೀ ಪ್ರತಾಪ ಚಂದ್ರ ಶೆಟ್ಟಿ, (ಕುಂದಾಪುರ) :- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕಳೆದ ಒಂದು ವರ್ಷದಲ್ಲಿ ಕುಂದಾಪುರ ಪುರಸಭೆಯಿಂದ ಮಂಜೂರಾದ ನಿವೇಶನಗಳು ಎಷ್ಟು?

ನಿವೇಶನ ಮಂಜಾರಾದ ಪೂರ್ಣ ವಿವರ ಒದಗಿಸುವುದು.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :-

ಅ) ಒಂದು. ಬಡೇರ ಹೋಬಳಿ ಗ್ರಾಮದ ಭರತ ಕಾಲೋನಿಯ ಆಶ್ರಯ ನಿವೇಶನ ಸಂಖ್ಯೆ 109 ನ್ನು ಪರಿಶಿಷ್ಟ ಜಾತಿಗೆ ಸೇರಿದ ಶ್ರೀಮತಿ ಚಿಕ್ಕಮ್ಮನವರಿಗೆ ಮಂಜೂರು ಮಾಡಿದ್ದು ಹಕ್ಕುಪತ್ರವನ್ನು ವಿತರಿಸಲಾಗಿದೆ.

ವಿಷಯ :- ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಅರೆಯುವ ಸಾಮರ್ಥ್ಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 829 (1142)

ಶ್ರೀ ಡಿ. ಆರ್. ಪಾಟೀಲ್ (ಗದಗ) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ವರ್ಷ ರಾಜ್ಯದಲ್ಲಿ ಉತ್ಪಾದನೆಯಾದ ಒಟ್ಟು ಕಬ್ಬಿನ ಪ್ರಮಾಣವೆಷ್ಟು? ರಾಜ್ಯದಲ್ಲಿ ಇರುವ ಕಬ್ಬು ಅರೆಯುವ ಸಾಮರ್ಥ್ಯ ಎಷ್ಟು?